<u>ಸಾಕ್ಷಿಯನ್ನು ದಿಃ-25.05.2023 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಪಿಡಬ್ಲ್ಯೂ-1</u>

**<u>ಪಾಟೀಸವಾಲುಃ- ಆರೋಪಿ ಪರ ವಕೀಲರಿಂದಃ-</u>**

1. 1 ನೇ ಆರೋಪಿ ನನಗೆ ಅಣ್ಣನ ಮಗನಾಗಬೇಕು, ನನ್ನ ಅಣ್ಣನ ಹೆಂಡತಿ 1 ನೇ ಆರೋಪಿಯ ತಾಯಿಯ ವಿರುದ್ದ ಸಿವಿಲ್ ಪ್ರಕರಣ ದಾಖಲು ಮಾಡಿದ್ದಾರೆ ಎಂದರೆ ಸರಿ. ಸದರಿ ಸಿವಿಲ್ ಪ್ರಕರಣ ಈ ಪ್ರಕರಣ ದಾಖಲಾಗುವ ಪೂರ್ವದಲ್ಲೇ ಚಾಲ್ತಿಯಲ್ಲಿತ್ತು ಎಂದರೆ ಸರಿ. ಆರೋಪಿಗಳು ಯಾವ ಸರ್ವೆ ನಂ. ಅಳತೆಗೆ ಸರ್ವೆಯರನ್ನು ಕರೆದುಕೊಂಡು ಬಂದಿದ್ದರು ಗೊತ್ತಿಲ್ಲ. ಸರ್ವೆ ನಂ.322/2 ವಿಸ್ತೀರ್ಣ 0.28.08.00 ಗುಂಟೆ 1 ನೇ ಆರೋಪಿಯ ತಾಯಿಯ ಹೆಸರಿಗೆ ಇದೆ ಎಂದರೆ ಸರಿ. ದಿನಾಂಕ 11-10-2016 ರಂದು ಆರೋಪಿಗಳು ಸರ್ವೆ ನಂ. 322/2 ರ ಅಳತೆಗೆ ಸರ್ವೆಯರನ್ನು ಕರೆದುಕೊಂಡು ಬಂದಿದ್ದರು ಎಂದರೆ ಸರಿ. ನಾನು ಮತ್ತು ಚಾಸಾ-2 ರವರು 1 ನೇ ಆರೋಪಿಗೆ ಸರ್ವೆ ಮಾಡಿಸಬೇಡವೆಂದು ಹಲ್ಲೆ ಮಾಡಿರುತ್ತೇವೆ ಎಂದರೆ ಸರಿ. ಆ ನಂತರ ಸರ್ವೆಯರು ಹೊರಟು ಹೋಗಿರುತ್ತಾರೆ. ಸರ್ವೆಯರುಗಳು ಹೊರಟು ಹೋದ ನಂತರ 1 ನೇ ಆರೋಪಿ ದೂರು ದಾಖಲು ಮಾಡಲು ಪೊಲೀಸ್ ಠಾಣೆಗೆ ಹೋಗಿರುತ್ತಾರೆ ಎಂದರೆ ಸರಿ. 1 ನೇ ಆರೋಪಿಯು ದೂರು ದಾಖಲು ಮಾಡುತ್ತಾರೆಂಬ ಕಾರಣಕ್ಕೆ ನಾನು ಸಹ ದೂರು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಆರೋಪಿ ದೂರು ಕೊಡಲು ಹೋದ ನಂತರ ಗಲಾಟೆಯಾದ ಸ್ಥಳಕ್ಕೆ ಬರಲಿಲ್ಲ ಎಂದರೆ ಸರಿ. ನಿ.ಪಿ-1 ರ ಸಂಗತಿಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ಪೊಲೀಸರು ಸ್ಥಳ ಮಹಜರ್ ಯಾವ ದಿನಾಂಕದಂದು ಮಾಡಿರುತ್ತಾರೆ ಗೊತ್ತಿಲ್ಲ, ಆದರೆ 4 ವರ್ಷಗಳ ಹಿಂದೆ ಮಾಡಿರುತ್ತಾರೆ. ಸ್ಥಳ ಮಹಜರ್ ಮಾಡಲು ಯಾವುದೇ ಪೊಲೀಸ್ ರು ಬಂದಿರಲಿಲ್ಲ ಎಂದರೆ ಸರಿಯಲ್ಲ. ಪೊಲೀಸ್ ನವರು ಸ್ಥಳಕ್ಕೆ ಬಂದು ಗಲಾಟೆ ಬಗ್ಗೆ ವಿಚಾರಿಸಿರುತ್ತಾರೆ. ನಿ.ಪಿ-2 ನ್ನು ಪೊಲೀಸ್ ಠಾಣೆಯಲ್ಲಿ ಬರೆದಿರುತ್ತಾರೆ ಎಂದರೆ ಸರಿ. ನಿ.ಪಿ-2 ಕ್ಕೆ ಪೊಲೀಸ್

ಠಾಣೆಯಲ್ಲಿ ಬರೆದಿರುತ್ತಾರೆ ಎಂದರೆ ಸರಿ. ನಾನು ಪೊಲೀಸರಿಗೆ ಕೊಟ್ಟ ದೊಣ್ಣೆಗಳು ನಾವು ಸೌದೆಗೆಂದು ಇಟ್ಟುಕೊಂಡ ದೊಣ್ಣೆಗಳೆಂದರೆ ಸರಿ. ನಾನು ಆರೋಪಿಗಳ ವಿರುದ್ದ ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗಳು ನಮ್ಮ ಮೇಲೆ ಹಲ್ಲೆ ಮಾಡಿಲ್ಲ ಮತ್ತು ಅವಾಚ್ಯ ಶಬ್ದಗಳಿಂದ ಬೈದಿಲ್ಲ ಹಾಗೂ ಕೊಲೆ ಬೆದರಿಕೆ ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗಳ ವಿರುದ್ದ ಸುಳ್ಳು ದೂರನ್ನು ಕೊಟ್ಟು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವೈದ್ಯಾಧಿಕಾರಿಗಳಿಗೆ ಸುಳ್ಳು ಮಾಹಿತಿ ಕೊಟ್ಟು ಚಿಕಿತ್ಸೆ ಪಡೆದಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ.**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

1 ನೇ ಅಪರ ಸಿ.ಜೆ. ಮತ್ತು ಜೆಎಂಎಫ್.ಸಿ
ಮಳವಳ್ಳಿ